


ಎಡದಿಂದ ಬಲಕ್ಕೆ:

1. ವೇಣುನಾದನದ ಈ ಕ್ರಮ ಹೊಸದು ಬಿಡಿ (3)
3. ಗುಡುಗುತ್ತಿರುವಂತೆ ಸದ್ದು ಮಾಡುತ್ತಿದೆ, ಲೋಹದ ಹಾಳೆ (3)
4. ವರದರಾಜನ ದೇಗುಲದ ಬಳಿಯೇ ಕಡಲು, ನೋಡಿ (3)
6. ಸರ ಧರಿಸಿ ಆರೋಹಿಸಿದವರು ಕಂಡದ್ದು ತಾವರೆಯೇ ತಾನೇ? (4)
7. ಹಾಗೂ ಪಾಸು, ಹೀಗೂ ಪಾಸು. ಒಟ್ಟಾರೆ ಅಕ್ಕಪಕ್ಕ (4)
9. ಕೆಲಸಕ್ಕೆ ಕಾತರಿಸುವವರ ಸಂಖ್ಯೆ ನೂರು ಸಾವಿರದ ಲೆಕ್ಕದಲ್ಲಿ (4)
11. ವೀರ ಸಾಹಸಿಗರು ಅಲ್ಲಿ ಹತ್ತಾರು ನೂರು (4)
15. ಗಾಳಿಯಲ್ಲಿ ತೇಲುವಂತಿದ್ದಾನೆ ಮಿತ್ರ (3)
16. ವಾದ್ಯ ವಾದಕನ ಸುಂದರ ಮುಖ ನೋಡಿದಿರಾ? (3)
17. ಮನೆ ಮನೆಗೂ ಹೋಗಿ ನಮಸ್ಕಾರವೇ (3)

ಮೇಲಿಂದ ಕೆಳಕ್ಕೆ:

1. ಕುಡುಕರನ್ನ ಕಂಡರೇ ಗಡ ಗಡ (3)
2. ಆ ಭವ್ಯ ಭವನ ನಿರ್ಮಿಸಿದವ ಮುಸ್ಲಿಂ ಅರಸ (3)
3. ತೇರೆಳೆವ ಮುನ್ನ ಎಲ್ಲೆಲ್ಲೂ ಚಿಗುರು ಎಲೆ (3)
5. ಸರದಿ ಕಾದು ಪಡೆದದ್ದು ಇದೇ ಉಡುಪು (3)
6. ಕಾಲಕಸದಂತೆಯೇ ಅಲ್ಲಿ ಎಲ್ಲವೂ (3)
8. ಮಾರುದ್ದವೇ ಹೌದು, ಸ್ವಲ್ಪ ಹೆಚ್ಚು ಕಡಿಮೆ (3)
10. ತಂಬಿಗೆ ಕೊಳ್ಳಲು ಪಕ್ಷದ ಮೂರನೇ ದಿನವೇ ಸರಿ (3)
12. ನವಿಲಿನಲ್ಲಿ ಎಲ್ಲ ಬಣ್ಣಗಳೂ ಬೆರೆತುಹೋಗಿವೆ (3)
13. ನ್ಯಾಯವನ್ನು ಕಂಡದ್ದು ಇದೊಂದೇ ಕಣ್ಣು (3)
14. ಆ ಹಾವಿನ ನೆಲೆ ಇದೇ ಕುಸುಮೋದ್ಯಾನ (3)

## ಪದಬಂಧ: 27-1-2011ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅವ್ಯಾಹತ; 3. ಸಂಗಡ; 4. ರುಧಿರ; 6. ವಿಹರಣ; 7. ಕಷ್ಟಕಾಲ; 8. ಹಣಕಾಸು; 10. ರಣರಂಗ; 12. ಅಂತರ್ಧಾನ; 14. ನೂರು ಜನ; 16. ನೆನಪು; 17. ಕಾರಣ; 18. ರತ್ನಾಕರ.

ಮೇಲಿಂದ ಕೆಳಕ್ಕೆ:

1. ಅಡವಿ; 2. ತರುಣ; 3. ಸಂಚಕಾರ; 5. ರವಣ; 7. ಕನವರ; 9. ಸುಖಾಸನ; 11. ರಂಜನೆ; 13. ಕಾಂತಗುಣ; 14. ನೂಪುರ; 15. ನಕಾರ.

# ವಿದ್ಯಮಾನ ವಿಸ್ಮಯ

## ಅಗ್ನಿಪರ್ವತ ಸ್ಫೋಟ -ಏನೇನು ವಿಧ?

'ಅಗ್ನಿಪರ್ವತ'- ಅದು ಭೂಮೇಲ್ಮೈನ ಒಂದು ಪ್ರಧಾನ ಲಕ್ಷಣ, ಪೃಥ್ವಿಯ ಮೇಲ್ಮೈ ಆಗಿರುವ 'ತೊಗಟೆ'ಯ ಕೆಳಗಿನ 'ಕವಚ' ಭಾಗದಲ್ಲಿರುವ ಶಿಲಾಪಾಕ ಮತ್ತಿತರ ದ್ರವ್ಯಗಳು ಹೊರಕ್ಕೆ ಉಕ್ಕಿ ಅಥವಾ ರಭಸವಾಗಿ ಚಿಮ್ಮಿ ಅಥವಾ ಭಯಂಕರವಾಗಿ ಸ್ಫೋಟಿಸಿ ಬರುವ ಮಾರ್ಗಗಳೇ ಅಗ್ನಿಪರ್ವತಗಳು. ಜ್ವಾಲಾಮುಖಿ ಎಂಬ ಹೆಸರು ಕೂಡ ಅಗ್ನಿಪರ್ವತಗಳದೇ. ಭೂ ನೆಲದ ಮೇಲಷ್ಟೇ ಅಲ್ಲದೆ ಕಡಲಲ್ಲೂ ಅಗ್ನಿಪರ್ವತಗಳಿವೆ.

ವಿಸ್ಮಯ ಏನೆಂದರೆ ಅಗ್ನಿಪರ್ವತಗಳು ಸ್ಫೋಟಿಸುವ ಕ್ರಮ ಮತ್ತು ಅವುಗಳಿಂದ ಹೊರಬರುವ ದ್ರವ್ಯ- ಇವುಗಳಲ್ಲಿ ಬಹಳ ವೈವಿಧ್ಯ ಇದೆ. ಜ್ವಾಲಾಮುಖಿಗಳಿಂದ ಶಿಲಾಪಾಕ ಚಿಮ್ಮಬಹುದು, ಶಿಲಾಪಾಕದ ಮಹಾಪೂರವೇ ಹರಿಯಬಹುದು. ಕೆಂಪಾಗಿ ಕೆಂಡದಂತಾದ ಶಿಲಾತುಣುಕುಗಳು ಹೊಗೆ ಸಹಿತ ಕಾರಂಜಿಯಂತೆ ಉಕ್ಕಬಹುದು. ಬರೀ ನೀರಾವಿ, ಬರೀ ದೂಳು ಇಲ್ಲವೇ ಬರೀ ಬೂದಿ ಚಿಮ್ಮಬಹುದು. ಇಂಥ ಚಟುವಟಿಕೆ ಕೆಲವೇ ತಾಸುಗಳಿಂದ ಕೆಲವಾರು ದಿನಗಳ ಕಾಲ ನಡೆಯಬಹುದು.

ಅಗ್ನಿಪರ್ವತಗಳು ಹೊರತರುವ ದ್ರವ್ಯದ ವಿಧ ಮತ್ತು ಅವು ಸ್ಫೋಟಿಸುವ ವಿಧಾನ- ಇವುಗಳಲ್ಲಿ ಸ್ಪಷ್ಟವಾದ ಏಳು ಭಿನ್ನ ಭಿನ್ನ ಬಗೆಗಳನ್ನು ತಜ್ಞರು ಗುರುತಿಸಿದ್ದಾರೆ, ಹೆಸರಿಸಿದ್ದಾರೆ. ಜ್ವಾಲಾಮುಖಿ ಸ್ಫೋಟದ ಆ ಸಪ್ತ ವಿಧಗಳು–

1. ಐಸ್‌ಲ್ಯಾಂಡಿಕ್ ವಿಧ: ನೆಲದ ಬಿರುಕುಗಳಿಂದ ನಿಧಾನವಾಗಿ ಉಕ್ಕಿ ಹರಿವ ಶಿಲಾರಸ. ಯಾವುದೇ ಸ್ಫೋಟ, ಸಿಡಿತ, ಸದ್ದು-ಗದ್ದಲ ಇಲ್ಲದೆ ನೆಲದ ಮೇಲೆ ಹರಡುತ್ತದೆ.

2. ಹವಾಯಿಯನ್ ವಿಧ: ಈ ವಿಧದಲ್ಲಿ ತೆಳ್ಳನೆಯ ದ್ರವ ರೂಪದ ಲಾವಾ ನಿಶ್ಶಬ್ದವಾಗಿ ಉಕ್ಕಿ ಉಕ್ಕಿ ಹರಿಯುತ್ತ ಹೋಗುತ್ತದೆ.

3. ಸ್ಟ್ರಾಂಬೋಲಿಯನ್ ವಿಧ: ಈ ವರ್ಗದ ಜ್ವಾಲಾಮುಖಿಗಳು ಚಿಕ್ಕ ಚಿಕ್ಕ



ಸಿಡಿತಗಳ ಮೂಲಕ ಶಿಲಾಪಾಕವನ್ನು ಕಕ್ಕುತ್ತವೆ.

4. ವಲ್ಕಾನಿಯನ್ ವಿಧ: ಭಾರೀ ಸ್ಫೋಟದೊಡನೆ ಬೃಹತ್ ಕಾರಂಜಿಯಂತೆ ಚಿಮ್ಮುವ ಶಿಲಾಪಾಕದ ಜೊತೆಗೇ ಅಪಾರ ಅನಿಲಗಳು ಹೊಮ್ಮುತ್ತವೆ; ಬೂದಿಯ ಮಳೆಯೂ ಸುರಿಯುತ್ತದೆ.

5. ವೆಸೂವಿಯನ್ ವಿಧ: ಪ್ರಳಯಕಾರೀ ಸ್ಫೋಟದೊಡನೆ ಉಕ್ಕುವ ಅಪಾರ ಪ್ರಮಾಣದ ಬರೀ ಬೂದಿ ಮುಗಿಲನ್ನೆಲ್ಲ ವ್ಯಾಪಿಸಿ ನೆಲಕ್ಕೆ ಸುರಿದು ವಿಶಾಲ ಪ್ರದೇಶಗಳನ್ನು ಮುಚ್ಚಿಹಾಕುತ್ತದೆ.

6. ಪೆಲಿಯನ್ ವಿಧ: ತುಂಬ ಸಾಂದ್ರ ಶಿಲಾಪಾಕವನ್ನೂ ಅನಿಲಗಳನ್ನೂ ಮುಗಿಲಿಗೇ ಎರಚುವಂತಹ ಪ್ರಬಲ ಸ್ಫೋಟ. ಭೂಕಂಪಗಳ ಸಾಹಚರ್ಯ ಬೇರೆ.

7. ಪ್ಲೈನಿಯನ್ ವಿಧ: ಭೀಕರ ಸ್ಫೋಟದೊಡನೆ ಕುದಿ ಕುದಿವ ಬೂದಿರಾಶಿಯನ್ನು ಏಳು-ಎಂಟು ಕಿ.ಮೀ. ಎತ್ತರಕ್ಕೆ ಧಾರೆ ಧಾರೆಯಾಗಿ ಎರಚುವ ಮಹಾಪ್ರಳಯ ಪ್ರದರ್ಶನ; ನೂರಾರು ಕೋಟಿ ಟನ್ ಬಿಸಿ ಬೂದಿ ಉತ್ಸರ್ಜನ.

ಅಗ್ನಿಪರ್ವತ ಸ್ಫೋಟದ ಸಪ್ತ ವಿಧ ಹೀಗೆ.

■ ಎನ್.ವಾಸುದೇವ್